**<u>ಸಾಕ್ಷಿಗೆ ದಿನಾಂಕ 01.08.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಜಿ ಎಸ್ ವಕೀಲರಿಂದ:</u>**

1. ಮೃತ ರಾಜು ನನ್ನ ಅಕ್ಕನ ಗಂಡ. ಕೆಎ-52-ಕೆ-4249 ದ್ವಿಚಕ್ರ ವಾಹನದಿಂದ ಅಪಘಾತವಾಗಿರುತ್ತದೆ. ಸದರಿ ವಾಹನದ ನನ್ನ ಅಣ್ಣನ ಹೆಸರಿನ ಮೇಲೆ ಇರುತ್ತದೆ. ದೂರುದಾರ ಮಂಜುನಾಥ ತಂದೆ ಶಿವಪ್ಪ ರವರು ಮೃತ ರಾಜುರವರ ಸೋದರ ಅಳಿಯ. ನಾನು ಈ ಅಪಘಾತಕ್ಕೆ ಸಂಬಂದಿಸಿದಂತೆ ಯಾವುದೇ ಚಿಕಿತ್ಸೆ ಪಡೆದಿಲ್ಲ. ಮೃತ ರಾಜುರವರನ್ನು ಹರ್ಷ ಆಸ್ಪತ್ರೆಗೆ ನಾನೇ ದಾಖಲಿಸಿರುತ್ತೇನೆ. ನನ್ನ ಮೊಬೈಲ್ ಸಂಖ್ಯೆ 9901912523 ಆಗಿರುತ್ತದೆ. ಸದರಿ ಮೊಬೈಲ್ ಸಂಖ್ಯೆ ನನ್ನ ಭಾವ ಶೇಖಪ್ಪ ತಂದೆ ರಾಮಪ್ಪ ರವರಿಗೆ ಸೇರಿರುತ್ತದೆ. ಸದರಿ ಮೊಬೈಲ್ ಸಂಖ್ಯೆ ಶೇಖಪ್ಪರವರಿಗೆ ಸೇರಿದ್ದರಿಂದ ಅವರೇ ಅದನ್ನು ಬಳಕೆ ಮಾಡುತ್ತಿದ್ದು, ನಾನು ಅದನ್ನು ಬಳಕೆ ಮಾಡಿಲ್ಲ ಎಂದರೆ ಸರಿಯಲ್ಲ.

2. ಮೃತ ರಾಜುರವರನ್ನು ಹರ್ಷ ಆಸ್ಪತ್ರೆಗೆ ನಾನು ದಾಖಲಿಸಿದೇ ಇರುವುದರಿಂದ ನನ್ನ ಹೆಸರು ಆಸ್ಪತ್ರೆಯ ದಾಖಲೆಯಲ್ಲಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ಮೃತ ರಾಜುರವರು ಮೇಲೆ ಹೇಳಿದ ದ್ವಿಚಕ್ರ ವಾಹನವನ್ನು ಒಮ್ಮೊಮ್ಮೆ ಬಳಸುತ್ತಿದ್ದರು ಎಂದರೆ ಸರಿಯಲ್ಲ. ದಿಃ20.08.2023 ರಂದು ನಾನು ಸದರಿ ದ್ವಿಚಕ್ರ ವಾಹನವನ್ನು ಬಳಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನ ವಿನಾಯಕರವರ ಬಳಿ ದ್ವಿಚಕ್ರ ವಾಹನವನ್ನು ಪೆಡದುಕೊಂಡು ಬಟ್ಟೆ ತರಲು ಹೋಗಿ ಬರುವಾಗ ಸ್ಕಿಡ್ ಆಗಿ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ದಿನ ನಾನು ದ್ವಿಚಕ್ರ ವಾಹನವನ್ನು ಚಲಾಯಿಸುತ್ತಿದ್ದಿದ್ದರೇ ನಾನೇ ಮೃತ ರಾಜುರವನ್ನು ಆಸ್ಪತ್ರೆಗೆ ದಾಖಲಿಸಿಸುತ್ತಿದ್ದೆ ಹಾಗೂ ನನ್ನ ಹೆಸರು ಆಸ್ಪತ್ರೆಯಲ್ಲಿ ನಮೂದಾಗುತ್ತಿತ್ತು ಎಂದರೆ ಸರಿಯಲ್ಲ.

3. ನೆಲಮಂಗಲದ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಅಪಘಾತಕ್ಕೆ ಸಂಬಂಧಿಸಿದ ಪ್ರಕರಣ ವಿಚಾರಣೆ ಹಂತದಲ್ಲಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ನನ್ನ ವಿರುದ್ಧ ಆಪಾದನೆ ರಚಿಸಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ನ್ಯಾಯಾಲಯಾದಿಂದ ಇನ್ನೂ ಸಮನ್ಸ್ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನಾನು ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗುತ್ತಿದ್ದರೂ ಸಹ ಸಮನ್ಸ್ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ರಾಜುರವರು ಸ್ವತಃ ದ್ವಿಚಕ್ರ ವಾಹನದಿಂದ ಬಿದ್ದು ಗಾಯಗೊಂಡು ಮೃತಪಟ್ಟಿದ್ದರಿಂದ ಪರಿಹಾರ ದೊರೆಯಲಿ ಎಂಬ ಉದ್ದೇಶದಿಂದ ನನಗೆ ದ್ವಿಚಕ್ರ ವಾಹನ ಚಲಾಯಿಸಲು ಬರುತ್ತಿದೆ ಎಂಬ ಕಾರಣದಿಂದ ಸವಾರನಾಗಿ ಸೇರಿಸಿ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನನ್ನ ಹೆಸರು ಪೋಲೀಸ್ ದಾಖಲೆಗಳಲ್ಲಿ ಮಾತ್ರ ಇದ್ದು ಆಸ್ಪತ್ರೆಯ ದಾಖಲೆಗಳಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

4. ವಿಮಾ ಪರಿಹಾರ ಪಡೆಯುವ ಉದ್ದೇಶದಿಂದ ಅರ್ಜಿದಾರರು, ನಾನು, ಒಂದನೇ ಎದುರುದಾರರ ಮತ್ತು ಪೋಲೀಸರು ಸೇರಿಕೊಂಡು ಶಾಮೀಲಾಗಿ ಸುಳ್ಳು ದೂರು ನೀಡಿದ್ದರ ಮೇರೆಗೆ, ಪೋಲೀಸರು ನನ್ನ ವಿರುದ್ಧ ಸುಳ್ಳು ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದ್ವಿತೀಯ ಪಿಯುಸಿ ಓದಿರುತ್ತೇನೆ. ನಾನು ಪಾತ್ರೆ ವ್ಯಾಪಾರ ಮಾಡಿಕೊಂಡು ಇರುತ್ತೇನೆ. ಅರ್ಜಿದಾರರರಿಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಒಂದನೇ ಎದುರುದಾರರು ಏಕಪಕ್ಷೀಯ.**
**ಮರು ವಿಚಾರಣೆಃ ಇಲ್ಲ.**
**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**